ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಭಾ.ಕೃ.ಸಂ.ಮಂ.- ಕೃಷಿ ವಿಜ್ಞಾನ ಕೇಂದ್ರ

ಸೈದಾಪುರ ಫಾರ್ಮ, ಧಾರವಾಡ -580 005

ವಾರ್ತಾ ಪತ್ರ

ಸಂಪುಟ: 17 | ಸಂಚಿಕೆ: 1 | ಜನವರಿ-ಫೆಬ್ರುವರಿ, 2018

## ಒಳ ಆವರಣ ತರಬೇತಿಗಳು

13/01/2018 ರಂದು ಅಂತಿಮ ವರ್ಷದ ಬಿ.ಎಸ್‌ಸಿ. (ಕೃಷಿ) ಗುಜರಾತ ವಿದ್ಯಾರ್ಥಿಗಳಿಗೆ ಕೃಷಿ ವಿಜ್ಞಾನ ಕೇಂದ್ರದ ಕಾರ್ಯ ಚಟುವಟಿಕೆಗಳ ಅಧ್ಯಯನದ ಕುರಿತು ತರಬೇತಿ



**17.01.2018 ರಂದು ತಮಿಳುನಾಡು ರೈತರಿಗೆ ಸಮಗ್ರ ಕೃಷಿಯ ಬಗ್ಗೆ ತರಬೇತಿ**



12.02.2018 ರಂದು ಸಮಗ್ರ ಬಾಳೆ ನಿರ್ವಹಣೆಯ ಬಗ್ಗೆ ರೈತರಿಗೆ ತರಬೇತಿ



03.01.2018 ರಂದು ಅಜೋಲ್ಲಾ ಬಗ್ಗೆ ರೈತರಿಗೆ ತರಬೇತಿ



10.01.2018 ರಂದು ಎರೆಹುಳು ಗೊಬ್ಬರದ ಬಗ್ಗೆ ರೈತರಿಗೆ ತರಬೇತಿ







**ಅಂತಿಮ ವರ್ಷದ ಬಿ.ಎಸ್.ಸಿ. ವಿದ್ಯಾರ್ಥಿಗಳಿಗೆ ತರಬೇತಿ**



ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಧಾರವಾಡದ ಕೃಷಿ ಮಹಾವಿದ್ಯಾಲದ ಎರಡನೇಯ ವರ್ಷದ ಬಿ.ಎಸ್‌ಸಿ. (ಕೃಷಿ) ವಿದ್ಯಾರ್ಥಿಗಳಿಗೆ ಕೃಷಿ ವಿಜ್ಞಾನ ಕೇಂದ್ರದ ಕಾರ್ಯ ಚಟುವಟಿಕೆಗಳ ಅಧ್ಯಯನದ ಕುರಿತು ಒಂದು ದಿನದ ತರಬೇತಿನ್ನು 15.02.2018ರಂದು ಆಯೋಜಿಸಿಲಾಗಿತ್ತು.

23.02.2018 ರಂದು ತೋಟಗಾರಿಕೆಯ ಬೆಳೆಗಳು ಹಾಗೂ ತಳಿಗಳ ಬಗ್ಗೆ ರೈತರಿಗೆ ತರಬೇತಿ



12.03.2018 ರಂದು ತೋಟಗಾರಿಕೆಯ ಬೆಳೆಗಳ ಸಸ್ಯೋತ್ಪಾದನೆಯ ಕುರಿತು ರೈತರಿಗೆ ತರಬೇತಿ



## ಕ್ಷೇತ್ರೋತ್ಸವಗಳು

### "ಜೋಳ (ಎಸ್ ಪಿ ವ್ಹಿ–2217) ಬೆಳೆ ಕ್ಷೇತ್ರೋತ್ಸವ"





ಕೃಷಿ ವಿಜ್ಞಾನ ಕೇಂದ್ರ, ಧಾರವಾಡವು "ಜೋಳ (ಎಸ್ ಪಿ ವ್ಹಿ–2217) ಬೆಳೆ ಕ್ಷೇತ್ರೋತ್ಸವವನ್ನು" ದಿನಾಂಕ: 30.01.2018 ರಂದು ಧಾರವಾಡ ತಾಲೂಕಿನ ಸೋಮಾಪುರ ಗ್ರಾಮದ ಶ್ರೀ ಸಿದ್ದಪ್ಪಾ ಮುತ್ತಗಿ ಇವರ ಕ್ಷೇತ್ರದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸಹ ವಿಸ್ತರಣಾ ನಿರ್ದೇಶಕರಾದ ಡಾ. ಬಿ.ಬಿ. ಚನ್ನಪ್ಪಗೌಡರ ಅವರು ಅಧ್ಯಕ್ಷತೆ ವಹಿಸಿ ರೈತರನ್ನು ಉದ್ದೇಶಿಸಿ ಜೋಳವು ನಮ್ಮ ಉತ್ತರ ಕರ್ನಾಟಕ ಜನರ ಮುಖ್ಯ ಆಹಾರ ಬೆಳೆಯಾಗಿದೆ. ಜೋಳದ ಹೊಸ ತಳಿ, ಅವುಗಳ ವಿಶೇಷತೆ ಮತ್ತು ಜೋಳವನ್ನು ಮೌಲ್ಯವರ್ಧನೆ ಮಾಡಿ ಅಧಿಕ ಲಾಭವನ್ನು ರೈತರು ಪಡೆಯಬಹುದು ಹಾಗೂ ಸಮಗ್ರ ಕೃಷಿ ಪದ್ದತಿಯನ್ನು ಅಳವಡಿಸಿಕೊಳ್ಳಿ ಎಂದು ರೈತರಿಗೆ ತಿಳಿಸಿದರು. ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರಾದ ಡಾ. ಶುಭಾ ಎಸ್. ಮುಖ್ಯ ಅಥಿತಿಯಾಗಿ ಭಾಗವಹಿಸಿ ಜೋಳದ ತಳಿಗಳನ್ನು ರೈತರೆ ಸ್ವತಃ ಸಂಗ್ರಹಿಸಿ ಸಂಸ್ಕರಣೆ ಮಾಡಿ ಕಡಿಮೆ ಖರ್ಚಿನಲ್ಲಿ ಅಧಿಕ ಆದಾಯ ಪಡೆಯುವ ಬೆಳೆಯಾಗಿದೆ ಹಾಗೂ ಕೊಟ್ಟಿಗೆ ಅಥವಾ ಕಾಂಪೋಸ್ಟ ಗೊಬ್ಬರವನ್ನು ಬಿತ್ತನೆಗೆ 3 ವಾರ ಮೊದಲು ಮಣ್ಣಿಗೆ ಸೇರಿಸಬೇಕು ಮತ್ತು ಅಧಿಕೃತವಾದ ಬಿತ್ತನೆ ಬೀಜವನ್ನು ಬಳಸಬೇಕು ಎಂದು ರೈತ ಸಮುದಾಯಕ್ಕೆ ಅರಿವು ಮೂಡಿಸಿದರು. ಸುಮಾರು 40 ಕ್ಕೂ ಹೆಚ್ಚು ರೈತರು /ರೈತ ಮಹಿಳೆಯರು ಈ ಕ್ಷೇತ್ರೋತ್ಸವದಲ್ಲಿ ಪಾಲ್ಗೊಂಡಿದ್ದರು.

### "ಕುಸುಬೆ (ಎ–1) ಬೆಳೆಯ ಕ್ಷೇತ್ರೋತ್ಸವ"





ಕೃಷಿ ವಿಜ್ಞಾನ ಕೇಂದ್ರ, ಧಾರವಾಡವು ಕುಸುಬೆ (ಎ–1) ಬೆಳೆಯ ಕ್ಷೇತ್ರೋತ್ಸವವನ್ನು ದಿನಾಂಕ: 30.01.2018 ರಂದು ಹುಬ್ಬಳ್ಳಿ ತಾಲೂಕಿನ ಶಿರಗುಪ್ಪಿ ಗ್ರಾಮದ ಶ್ರೀ ರಂಗಪ್ಪ ಮುತ್ತಣ್ಣನವರ ಮತ್ತು ಶ್ರೀ ಬಸವರಾಜ ಅಣ್ಣಿಗೇರಿ ಇವರುಗಳ ಕ್ಷೇತ್ರದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸಹ ವಿಸ್ತರಣಾ ನಿರ್ದೇಶಕರಾದ ಡಾ. ಬಿ.ಬಿ. ಚನ್ನಪ್ಪಗೌಡರ ಅವರು ಅಧ್ಯಕ್ಷತೆ ವಹಿಸಿ ರೈತರನ್ನು ಉದ್ದೇಶಿಸಿ ಕುಸುಬೆಯನ್ನು ಪುರಾತನ ಕಾಲದಿಂದಲೂ ನಮ್ಮ ಪೂರ್ವಜರು ಬೆಳೆಯುತ್ತಾ ಬಂದಿದ್ದಾರೆ. ಕುಸುಬೆಯ ಹೂವಿನಲ್ಲಿರುವ ಕಿತ್ತಳೆ ಕೆಂಪು ಬಣ್ಣವನ್ನು ಮತ್ತು ಬೀಜದಿಂದ ಎಣ್ಣೆಯನ್ನು ತೆಗೆಯುತ್ತಿದ್ದರು. ಆದರೆ ಕುಸುಬೆಯಲ್ಲಿ ಸಮೃದ್ಧವಾಗಿರುವ ಪಾಲಿಅನ್‌ಸ್ಯಾಚುರೆಟೆಡ್, ಫ್ಯಾಟಿ ಆ್ಯಸಿಡ್ ಅಂಶಗಳು ರಕ್ತದಲ್ಲಿ ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡುವುದರಿಂದ ಎಣ್ಣೆ ತಯಾರಿಸಲು ಈ ಬೆಳೆಯ ಬೇಡಿಕೆಯು ಹೆಚ್ಚಾಗಿದೆ. ರೈತರು ಸಹ ಕುಸುಬೆ ಬೆಳೆಯನ್ನು ಬೆಳೆದು ಅದನ್ನು ಮೌಲ್ಯವರ್ಧನೆ ಮಾಡಿ ಎಣ್ಣೆ ತೆಗೆದು ಅಧಿಕ ಲಾಭವನ್ನು ಪಡೆಯಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಚೈತ್ರಾ ಶಿರೂರ ಅವರು ಕುಸುಬೆಯು ಒಂದು ಬಹು ಬೇಡಿಕೆಯುಳ್ಳ ಬೆಳೆಯಾಗಿದೆ, ವಾಣಿಜ್ಯ ಹಾಗೂ ಬೀಜೋತ್ಪಾದನಾ ಕ್ಷೇತ್ರಗಳಲ್ಲಿ ಸಂಯುಕ್ತ ಕಟಾವು ಹಾಗೂ ಒಕ್ಕಣೆ ಯಂತ್ರವನ್ನು ಬಳಸುವುದರಿಂದ ಕಾಳು/ಬೀಜ ಗುಣಲಕ್ಷಣಗಳಿಗೆ ಯಾವುದೇ ರೀತಿಯಲ್ಲಿ ಹಾನಿಯಾಗುವುದಿಲ್ಲ ಹಾಗೂ ಆರ್ಥಿಕವಾಗಿ ಶೇ. 40 ರಿಂದ 50 ರಷ್ಟು ಲಾಭ ಪಡೆಯಬಹುದು ಎಂದು ತಿಳಿಸಿದರು.

### "ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ–2018"





ದಿನಾಂಕ: 08.03.2018 ರಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ (ರಿ), ಧಾರವಾಡ ಇವರುಗಳ ಸಂಯುಕ್ತಾಶ್ರಯದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು "ಗ್ರಾಮೀಣ ಮತ್ತು ನಗರ ಮಹಿಳಾ ಕಾರ್ಯಕರ್ತರು, ಮಹಿಳಾ ಜೀವನವನ್ನು ರೂಪಾಂತರಿಸುವುದು" ಎಂಬ ಘೋಷವಾಕ್ಯದೊಂದೊಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ರಾಯಾಪುರದ ತರಬೇತಿ ಕೇಂದ್ರದಲ್ಲಿ ಆದರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ 1000 ರೈತ ಮಹಿಳೆಯರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಎಸ್.ಡಿ.ಎಂ. ನಾರಾಯಣ ಹೃದಯಾಲಯದ ವೈದ್ಯಾಧಿಕಾರುಗಳು ಉಚಿತ ತಪಾಸಣಾ ಚೀಟಿಯನ್ನು ಭಾಗವಹಿಸಿದ್ದ ಎಲ್ಲಾ ಮಹಿಳೆಯರಿಗೂ ವಿತರಿಸಿದರು.

### "ಕೃಷಿ ಉನ್ನತಿ ಮೇಳ 2018"





ದಿ. 17.03.2018 ರಂದು ನವ ದೆಹಲಿಯಲ್ಲಿ ಜರುಗಿದ **ಕೃಷಿ ವಿಜ್ಞಾನ ಕೇಂದ್ರಗಳ ರಾಷ್ಟ್ರೀಯ ಸಮ್ಮೇಳನ ಹಾಗೂ ಕೃಷಿ ಉನ್ನತಿ ಮೇಳದಲ್ಲಿ** ಗೌರವಾನ್ವಿತ ಪ್ರಧಾನ ಮಂತ್ರಿಗಳು 2022 ರೊಳಗೆ ರೈತರ ಆದಾಯ ದ್ವಿಗುಣಗೊಳಿಸಲು ಕೈಗೊಳ್ಳಬೇಕಾದ ಕಾರ್ಯಚಟುವಟಿಕೆಗಳ ಕುರಿತು ರೈತರನ್ನುದ್ದೇಶಿಸಿ ಮಾಡಿದ ಭಾಷಣದ ನೇರ ಪ್ರಸಾರ ಕಾರ್ಯಕ್ರಮವನ್ನು ವೀಕ್ಷಿಸಲು ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ, ಧಾರವಾಡದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ 350 ಕ್ಕೂ ಹೆಚ್ಚು ರೈತರು ಭಾಗವಹಿಸಿ ಕಾರ್ಯಕ್ರಮವನ್ನು ವೀಕ್ಷಿಸಿದರು. ಕಾರ್ಯಕ್ರಮದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ದೇಶಾದ್ಯಂತ 25 ಹೊಸ ಕೃಷಿ ವಿಜ್ಞಾನ ಕೇಂದ್ರಗಳನ್ನು ಉದ್ಘಾಟಿಸಿದರು. ಇದರಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡದ ವ್ಯಾಪ್ತಿಗೆ ಬರುವ ವಿಜಾಪೂರ ಜಿಲ್ಲೆಯ ಇಂಡಿ ಕೃಷಿ ವಿಜ್ಞಾನ ಕೇಂದ್ರವು ಒಂದು. ತಮ್ಮ ಭಾಷಣದಲ್ಲಿ ರೈತರು ಮಣ್ಣು ಪರೀಕ್ಷಾ ಆಧಾರಿತ ರಸಗೊಬ್ಬರ ಬಳಕೆ ಹಾಗೂ ಸಾವಯವ ಕೃಷಿಗೆ ಒತ್ತು ಕೊಡಲು ಕರೆ ನೀಡಿದರು. ಇದೇ ಸಂದರ್ಭದಲ್ಲಿ ಸಣ್ಣ ರೈತರು ರೈತ ಉತ್ಪಾದಕರ ಸಂಘಗಳನ್ನು ರಚಿಸಿದರೆ ಮಾತ್ರ ಉತ್ತಮ ಮಾರುಕಟ್ಟೆ ಬೆಲೆಯನ್ನು ಪಡೆಯಬಹುದು ಎಂದು ತಿಳಿಸಿದರು. ಜೇನು ಕೃಷಿ ಹಾಗೂ ಇನ್ನಿತರ ಕೃಷಿಯೇತರ ಉಪ ಕಸುಬುಗಳನ್ನು ಅಳವಡಿಸಿಕೊಂಡರೆ ರೈತರು ಹೆಚ್ಚಿನ ಆದಾಯ ಪಡೆಯಬಹುದೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ವಿಶ್ವವಿದ್ಯಾಲಯ ಧಾರವಾಡದ ವಿಜ್ಞಾನಿಗಳು ಹಾಗೂ ವಿವಿಧ ಇಲಾಖಾ ಅಧಿಕಾರಿಗಳು ಭಾಗವಹಿಸಿದ್ದರು.

## "ಸಮಗ್ರ ಹೈನುಗಾರಿಕೆ ಅಭಿವೃದ್ಧಿ"





**ರಾಷ್ಟ್ರೀಯ ಮಿಷನ್ ಕೃಷಿ ವಿಸ್ತರಣೆ ಮತ್ತು ತಂತ್ರಜ್ಞಾನದ ಗ್ರಾಮೀಣ ಯುವಕರ ಕೌಶಲ್ಯ ತರಬೇತಿಯ ಅಡಿಯಲ್ಲಿ ಗ್ರಾಮೀಣ ಯುವಕರಿಗೆ "ಸಮಗ್ರ ಹೈನುಗಾರಿಕೆ ಅಭಿವೃದ್ಧಿ ಕುರಿತು"** ತರಬೇತಿಯನ್ನು ದಿ: 12 ರಿಂದ 17, ಮಾರ್ಚ್ 2018 ರವರೆಗೆ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಹೈನುಗಾರಿಕೆಯ ಮಹತ್ವ, ಹೈನು ತಳಿಗಳು, ತಳಿ ಅಭಿವೃದ್ಧಿ, ಗರ್ಭಧರಿಸಿದ, ಕರುಗಳ ಹಾಗೂ ಹಿಂಡುವ ರಾಸುಗಳ ಪಾಲನೆ ಮತ್ತು ಪೋಷಣೆ, ಬೆದೆಯ ಲಕ್ಷಣಗಳು, ಕೃತಕ ಗರ್ಭಧಾರಣೆ, ಸಂತಾನೋತ್ಪತ್ತಿ ಹಾಗೂ ಬರಡು ರಾಸುಗಳ ನಿರ್ವಹಣೆ, ಶುದ್ಧವಾದ ಹಾಲಿನ ಉತ್ಪಾದನೆ, ಜಾನುವಾರು ಸಾಕಾಣಿಕೆಯಲ್ಲಿ ಮೂಡನಂಬಿಕೆಗಳು ಮತ್ತು ಪ್ಲಾಸ್ಟಿಕನಿಂದಾಗುವ ಹಾವಳಿ, ಮೇವಿನ ಸಮರ್ಪಕ ಬಳಕೆ, ಪಶು ಆಹಾರವಾಗಿ ಅಜೋಲ್ಲಾ ಬಳಕೆ ಹಾಗೂ ಜಲ ಕೃಷಿ ಮೇವು, ಎರೆಹುಳು ಗೊಬ್ಬರ ಮತ್ತು ಜೈವಿಕ ಅನಿಲ ಉತ್ಪಾದನಾ ತಾಂತ್ರಿಕತೆ, ಕಡಿಮೆ ಖರ್ಚಿನಲ್ಲಿ ಹೆಚ್ಚು ಹಾಲು ಉತ್ಪಾದನೆ ಮತ್ತು ತ್ಯಾಜ್ಯ ವಸ್ತುಗಳ ನಿರ್ವಹಣೆ, ಜಾನುವಾರುಗಳಲ್ಲಿ ಸಾಂಕ್ರಾಮಿಕ ರೋಗಗಳು, ಜೈವಿಕ ಭದ್ರತೆ, ಪ್ರಥಮೋಪಚಾರ ಮತ್ತು ಕೆಚ್ಚಲು ಬಾವು ನಿರ್ವಹಣೆ, ಪಶುಪಾಲನಾ ಇಲಾಖೆ ಹಾಗೂ ನಬಾರ್ಡನಲ್ಲಿ ಹೈನುಗಾರಿಕೆಗೆ ದೊರೆಯುವ ವಿವಿಧ ಯೋಜನೆಗಳು ಮತ್ತು ಇತರೆ ಸೌಲಭ್ಯಗಳು, ಬ್ಯಾಂಕ್‌ನ ಸಾಲ ಹಾಗೂ ಸೌಲಭ್ಯಗಳು, ಜಾನುವಾರುಗಳ ವಿಮೆ ಮತ್ತು ಕುರಿತು ಕೇಂದ್ರದ ಪಶು ವಿಜ್ಞಾನಿಗಳು, ಕೃಷಿ ಮಹಾವಿದ್ಯಾಲಯದ ಪಶು ವಿಜ್ಞಾನ ವಿಭಾಗದ ಪ್ರಾಧ್ಯಾಪಕರು, ಉಪನ್ಯಾಸವನ್ನು ನೀಡಿದರು. ತರಬೇತಿಯಲ್ಲಿ ಸುಮಾರು 15 ಗ್ರಾಮೀಣ ಯುವಕರು ಮತ್ತು ಯುವತಿಯರು ಭಾಗವಹಿಸಿದ್ದರು.

## "ಕುರಿ ಮತ್ತು ಮೇಕೆ ಸಾಕಿ  ಕುಬೇರರಾಗಿ"





ರಾಷ್ಟ್ರೀಯ ಮಿಷನ್ ಕೃಷಿ ವಿಸ್ತರಣೆ ಮತ್ತು ತಂತ್ರಜ್ಞಾನದ ಗ್ರಾಮೀಣ ಯುವಕರ ಕೌಶಲ್ಯ ತರಬೇತಿಯ ಅಡಿಯಲ್ಲಿ ಗ್ರಾಮೀಣ ಯುವಕರಿಗೆ "ಲಾಭದಾಯಕ ಕುರಿ ಮತ್ತು ಮೇಕೆ ಸಾಕಾಣಿಕೆ" ಕುರಿತು ತರಬೇತಿಯನ್ನು ದಿ: 05 ರಿಂದ 10, ಮಾರ್ಚ್ 2018 ರವರೆಗೆ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಕೊನೆಯ ದಿನದಂದು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಡಾ. ಎಚ್ ಬಸಪ್ಪ ಇವರು ಅಧ್ಯಕ್ಷರಾಗಿ ಭಾಗವಹಿಸಿ ರೈತರು ತಮ್ಮ ಆದಾಯವನ್ನು ದ್ವಿಗುಣಗೊಳಿಸಲು ಕೇವಲ ಕೃಷಿಯನ್ನೆ ಅವಲಂಬಿಸದೇ ಕೃಷಿಯ ಪ್ರಮುಖ ಉಪ ಕಸುಬುಗಳಾದ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಕುರಿ ಅಥವಾ ಮೇಕೆ ಸಾಕಾಣಿಕೆ ಮತ್ತು ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು.  ಕಡಿಮೆ ಅವದಿಯಲ್ಲಿ ಹೆಚ್ಚು ಲಾಭ ಪಡೆಯಲು ಕುರಿ ಅಥವಾ ಮೇಕೆ ಸಾಕಾಣಿಕೆ  ಸೂಕ್ತವಾಗಿದೆ, ಏಕೆಂದರೆ ಕುರಿ/ಮೇಕೆಗಳು ಒಂದು ತರಹ ATM card ಇದ್ದ ಹಾಗೆ. ಇವುಗಳ ಉಪಉತ್ಪನ್ನಗಳಾದ ಮಾಂಸ, ಚರ್ಮ, ಹಿಕ್ಕಿ ಮತ್ತು ಹಾಲಿಗೆ ಬಹು ಬೇಡಿಕೆ ಇದ್ದು, ಔಷಧಿಯ ಗುಣಗಳನ್ನು ಹೊಂದಿದೆ. ಅಷ್ಟೇ ಅಲ್ಲದೇ ಜಾನುವಾರುಗಳ ಉಪಉತ್ಪನ್ನಗಳಿಗೆ ಮೌಲ್ಯವರ್ಧನೆ ಮಾಡುವುದ್ದರಿಂದ ಹೆಚ್ಚು ಲಾಭ ಪಡೆಯಬಹುದು ಎಂದು ಗ್ರಾಮೀಣ ಯುವಕರಿಗೆ ಕುರಿ ಮತ್ತು ಮೇಕೆ ಸಾಕಿ ಕುಬೇರರಾಗಿ ಎಂದು ಹೇಳಿದರು. ಈ ತರಬೇತಿಯಲ್ಲಿ ಸುಮಾರು ಸುಮಾರು 12 ಸಂಪನ್ಮೂಲ ವ್ಯಕ್ತಿಗಳು, 15 ಗ್ರಾಮೀಣ ಯುವಕರು ಮತ್ತು ಯುವತಿಯರು ಭಾಗವಹಿಸಿದ್ದರು.







5–7 ನೇ ಜನೆವರಿ 2018 ರಂದು ಕೃಷಿ ವಿಗ್ಯಾನ್ ಸೋಸೈಟಿ ಮತ್ತು ಐ.ಸಿ.ಎ.ಆರ್.–ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಫ್ರೆಶ್ ವಾಟರ್ ಅಕ್ವಾಲ್ಚರ್, ಓಡಿಶಾದ ಭುನೇಶ್ವರದಲ್ಲಿ ಆಯೋಜಿಸಿರುವ ಸೋಸೈಟಿ ಆಫ್ ಕೃಷಿ ವಿಗ್ಯಾನ್ ಸಂಘಟಿಸಿರುವ"Improving Income of Farmers through Agriculture & Aquaculture through Development Interventions" ಕುರಿತು ಒಂದನೇಯ ರಾಷ್ಟ್ರೀಯ ಸಮ್ಮೇಳನ.



19/02/2018 ರಂದು ಜರುಗಿದ ಒಂದು ದಿನದ ಹೂಗುಚ್ಛ ತಯಾರಿಕೆ ಹಾಗೂ ಹೂದಾನಿಯಲ್ಲಿ ಹೂವಿನ ಅಲಂಕಾರದ ಕುರಿತು ತರಬೇತಿ ಕಾರ್ಯಕ್ರಮದಲ್ಲಿ ತೋಟಗಾರಿಕಾ ವಿಭಾಗದ ವಿಜ್ಞಾನಿ ಭಾಗವಹಿಸಿರುವುದು.



ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿಯು ರಾಷ್ಟ್ರೀಯ ಪಶು ಆಹಾರ ಮತ್ತು ಶರೀರ ವಿಜ್ಞಾನ ಸಂಸ್ಥೆಯಲ್ಲಿ ದಿನಾಂಕ 16–17 ಫೆಬ್ರುವರಿ, 2018 ರವರೆಗೆ ಎರಡು ದಿನಗಳ **"ರೈತರ ಸಮಾವೇಶ"**ವನ್ನು ಆಯೋಜಿಸಲಾಗಿತ್ತು. ಸನ್ಮಾನ್ಯ ಕೇಂದ್ರ ಕೃಷಿ ಮಂತ್ರಿಗಳಾದ ಶ್ರೀ ರಾಧಾಮೋಹನ ಸಿಂಗ್ ಇವರು ಸಮಾವೇಶವನ್ನು ಉದ್ಘಾಟಿಸಿದರು ಹಾಗೂ ಕರ್ನಾಟಕ ರಾಜ್ಯದ ಇತರೆ ಕೇಂದ್ರ ಸಚಿವರುಗಳು ಭಾಗವಹಿಸಿದ್ದರು. ಈ ಸಮಾವೇಶದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಧಾರವಾಡದ ವಿಜ್ಞಾನಿಗಳು ಭಾಗವಹಿಸಿ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಆಧುನಿಕ ತಂತ್ರಜ್ಞಾನಗಳನ್ನು ಪ್ರದರ್ಶಿಸಿದರು.

## ಕೃಷಿ ವಿಜ್ಞಾನ ಕೇಂದ್ರಕ್ಕೆ ಗಣ್ಯರ ಭೇಟಿ



ATARI (Zone-XI) ನಿರ್ದೇಶಕರಾದ ಡಾ. ಎಮ್. ಜೆ. ಚಂದ್ರೇಗೌಡ ಮತ್ತು ವಿಸ್ತರಣಾ ನಿರ್ದೇಶಕರು ಡಾ.ಎಚ್. ಬಸಪ್ಪಾ, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ಕೃಷಿ ವಿಜ್ಞಾನ ಕೇಂದ್ರ, ಧಾರವಾಡಕ್ಕೆ ದಿ: 19.02.2018 ರಂದು ಭೇಟಿ ನೀಡಿ ಕೇಂದ್ರದ ಪ್ರಗತಿಯನ್ನು ಪರಿಶೀಲಿಸಿದರು.



## ವಿಶ್ಲೇಷಣಾತ್ಮಕ ತಾಕುಗಳಿಗೆ ಬೇಟಿ



ನವಲಗುಂದ ತಾಲೂಕಿನ ಶಿರೂರ ಗ್ರಾಮದ ಸಮಸ್ಯಾತ್ಮಕ ಪೇರಲ ತಾಕುಗಳಿಗೆ ಡಾ. ಶುಭಾ ಎಸ್. ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ, ಡಾ. ಅಕ್ಕಮಹಾದೇವಿ ಅಗಸಿಮನಿ (ವಿಜ್ಞಾನಿಗಳು ತೋಟಗಾರಿಕೆ) ಹಾಗು ಡಾ. ಪ್ರವೀಣ ಗೊರೋಜಿ (ಮಣ್ಣುಶಾಸ್ತ್ರ) ಭೇಟಿ ಮಾಡಿ ಸೂಕ್ತ ಮಾಹಿತಿ ನೀಡಿದರು



ನವಲಗುಂದ ತಾಲೂಕಿನ ಸೊಟಕನಾಳ ಗ್ರಾಮದ ಸಮಸ್ಯಾತ್ಮಕ ಗೋಧಿ ತಾಕುಗಳಿಗೆ ಡಾ. ಶುಭಾ ಎಸ್. ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ, ಕುಮಾರಿ ಕಲಾವತಿ ಕಂಬಳಿ (ವಿಜ್ಞಾನಿಗಳು ಕೀಟಶಾಸ್ತ್ರ), ಡಾ. ಅಕ್ಕಮಹಾದೇವಿ ಅಗಸಿಮನಿ (ತೋಟಗಾರಿಕೆ) ಹಾಗು ಡಾ. ವಿಜಯಕುಮಾರ (ಮಣ್ಣುಶಾಸ್ತ್ರ) ಭೇಟಿ ಮಾಡಿ ಸೂಕ್ತ ಮಾಹಿತಿ ನೀಡಿದರು


**ಸಂಪಾದಕರು ಹಾಗೂ ಪ್ರಕಾಶಕರು** : **ಡಾ. ಶುಭಾ ಎಸ್.**
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

**ಅಕ್ಷರ ಜೋಡಣೆ ಮತ್ತು ವಿನ್ಯಾಸ** : **ಡಿಟಿಪಿ, ಘಟಕ**
**ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ**

**ಸಹ ಸಂಪಾದಕರು**

**ಡಾ. ಅಕ್ಕಮಹಾದೇವಿ ಡಿ. ಅಗಸಿಮನಿ** — **ಡಾ. ಜಯಶ್ರೀ ಪತ್ತಾರ**
**ಕು. ಕಲಾವತಿ ಕೆ. ಕಂಬಳಿ** — **ಡಾ. ವಿಜಯಕುಮಾರ ಸಿ.**
**ಡಾ. ಪ್ರಸನ್ನ ಕುಮಾರ ಬಿ.ಎಚ್.** — **ಶ್ರೀಮತಿ ಶೈಲಜಾ ಎನ್. ಗಲಗಲಿ**



**ಇಂದ,**
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಭಾ.ಕೃ.ಸಂ.ಮಂ.–ಕೃಷಿ ವಿಜ್ಞಾನ ಕೇಂದ್ರ
ಸೈದಾಪುರ ಫಾರ್ಮ್, ಧಾರವಾಡ 580 005
ಕರ್ನಾಟಕ, ದೂರವಾಣಿ : 0836–2444272
ಮಿಂಚಂಚೆ : kvkdwd@uasd.in
ವೆಬ್‌ಸೈಟ್ : www.kvkdharwad.org
ಫೇಸ್‌ಬುಕ್ : Krishi Vigyan Kendra Dharwad


**ಗೆ,**

**ತೆರೆದ ಅಂಚೆ**